# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಗುರುವಾರ, ೨೩, ಜುಲೈ, ೨೦೨೬ (ಶ್ರಾವಣ, ೦೧, ಶಕವರ್ಷ, ೧೯೪೮)<br>BENGALURU, THURSDAY, 23, JULY, 2026 ( SHRAVANA , 01, SHAKAVARSHA, 1948) | ನಂ. ೫೫೪<br>No. 554 |
|---|---|---|



## ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ಆಯುಕ್ತರು ರವರ ಕಚೇರಿ, ಎನ್.ಅರ್.ಚೌಕ, ಬೆಂಗಳೂರು-560001


*********************************************************************************************

ಸಂಖ್ಯೆ: ಜಿಬಿಎ/ಮು.ಆ/ಪಿ.ಅರ್/ 203/ 26–27 ದಿನಾಂಕ: 23–07–2026

## ಅಧಿಸೂಚನೆ

ವಿಷಯ: ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ (ಜಿ.ಬಿ.ಜಿ) ಕಾಯ್ದೆ, 2024 ರ ಕಲಂ 232 ರಲ್ಲಿನ ಅವಕಾಶ ಹಾಗೂ ಕೆಟಿಸಿಪಿ ಕಾಯ್ದೆ ಕಲಂ 15 ರಡಿಯಲ್ಲಿ ಕಟ್ಟಡ ನಿರ್ಮಾಣಗಳಿಗೆ ಅನುಮತಿಗಳನ್ನು ನೀಡುವಾಗ ನಗರ ಪಾಲಿಕೆಯಿಂದ ಪಾವತಿಸಿಕೊಳ್ಳಬೇಕಾದ ವಿವಿಧ ಶುಲ್ಕಗಳ ದರಗಳನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ:1) ಆಡಳಿತಗಾರರು, ಬೆಂಗಳೂರು ಕೇಂದ್ರ ನಗರ ಪಾಲಿಕೆ ರವರು ಕೌನ್ಸಿಲ್ ಸಭೆ ಅಧಿಕಾರ ಚಲಾಯಿಸಿ ಕೈಗೊಂಡ ನಿರ್ಣಯ ವಿಷಯ ಸಂಖ್ಯೆ: 34/2025–26 ದಿ:23.02.2026

2) ಆಯುಕ್ತರು, ಬೆಂಗಳೂರು ಕೇಂದ್ರ ನಗರ ಪಾಲಿಕೆ ರವರ ಪ್ರಸ್ತಾವನೆ ಸಂಖ್ಯೆ: ಬೆಂಕೇನಪಾ/ಜಂನಿ/ಪಿ.ಅರ್/103/2025–26 ದಿನಾಂಕ: 20.02.2026

3) ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಧಿಸೂಚನೆ ಸಂಖ್ಯೆ: ಬೆಂಕೇನಪಾ /ಆ/ಪಿ.ಅರ್/48/26–27 ದಿನಾಂಕ:14.05.2026

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ರ ಕಲಂ 230 & ಕೆಟಿಸಿಪಿ ಕಾಯ್ದೆ, 1961 ರ ಕಲಂ 15 ರ ಅವಕಾಶಗಳಡಿ ಕಟ್ಟಡ ನಿರ್ಮಾಣಗಳಿಗೆ ನಗರ ಪಾಲಿಕೆಯಿಂದ ಅನುಮತಿ ನೀಡಲಾಗುತ್ತಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಬಗೆಯ ಕಟ್ಟಡ ನಿರ್ಮಾಣಗಳಿಗೆ ನಕ್ಷೆ ಅನುಮೋದನೆ, ಪರಿಷ್ಕೃತ ನಕ್ಷೆ ಅನುಮೋದನೆ, ಪ್ಲಿಂತ್ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರವನ್ನು ಅನುಮೋದಿಸುವಾಗ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 ಸೆಕ್ಷನ್ 232 (2) ರಲ್ಲಿ ವಿಧಿಸಬಹುದಾದ ವಿವಿಧ ಶುಲ್ಕಗಳನ್ನು 233(2) ರಡಿಯಲ್ಲಿ ನಗರ ಪಾಲಿಕೆಯಿಂದ ಪಾವತಿಸಿಕೊಳ್ಳಬೇಕಾಗಿರುತ್ತದೆ.

ಕೆಟಿಸಿಪಿ ಕಾಯ್ದೆ, 1961 ರ ಕಲಂ 17 ರಡಿಯಲ್ಲಿ ಮಂಜೂರಾತಿ ನೀಡಲಾಗುವ ಏಕ ನಿವೇಶನ ನಕ್ಷೆ ಮಂಜೂರಾತಿ ಅಧಿಕಾರವನ್ನು 1,000 ಚಮೀ ವರೆಗೆ ವಲಯ ಜಂಟಿ ಆಯುಕ್ತರು ಮತ್ತು 10,000 ಚಮೀ ವರೆಗೆ ಆಯುಕ್ತರಿಗೆ ಅನುಕ್ರಮವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 515 ಎಂಎನ್‌ಜೆ (ಇ) 2025 ದಿನಾಂಕ: 07.02.2026 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 515 ಎಂಎನ್‌ಜೆ 2025 (ಇ) ದಿನಾಂಕ: 10.11.2025 ರಲ್ಲಿ ಪ್ರತ್ಯಾಯೋಜಿಸಲಾಗಿರುತ್ತದೆ.

ಕೆಟಿಸಿಪಿ ಕಾಯ್ದೆ–1961 ಕಲಂ 18(1), 18(1–ಎ) & 18(ಎ) ರ ಅವಕಾಶದನ್ವಯ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ (KPA) 1965 ರ ನಿಯಮ 37ಕ್ಕೆ ತಿದ್ದುಪಡಿ ತಂದು ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 3 ಟಿಟಿಪಿ 2015 ದಿನಾಂಕ: 25.02.2020 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 23 ಟಿಟಿಪಿ 2020 (ಇ) ದಿ: 21.06.2021 ರಲ್ಲಿ ಕಟ್ಟಡ ಮತ್ತು ಅಭಿವೃದ್ಧಿಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಪಾವತಿಸಿಕೊಳ್ಳಬೇಕಾದ ನಿವೇಶನ ಹಾಗೂ ಕಟ್ಟಡದ ವಿಸ್ತೀರ್ಣಕ್ಕೆ ಉತ್ತಮತೆ ಶುಲ್ಕ, ಕೆರೆ ಪುನರುಜ್ಜೀವನ ಶುಲ್ಕ ಮತ್ತು ಸೆಸ್ ಹಾಗೂ ಸರ್‌ಚಾರ್ಜ್‌ಗಳನ್ನು ನಿಗದಿಪಡಿಸಿ ಅಧಿಸೂಚಿಸಲಾಗಿರುತ್ತದೆ. ಇದನ್ನು ನಗರ ಪಾಲಿಕೆ ವ್ಯಾಪ್ತಿಗಳಲ್ಲಿಯೂ ಕೂಡ ಯಥಾವತ್ತಾಗಿ ಅಳವಡಿಸಿಕೊಂಡು ಕಟ್ಟಡ ಮತ್ತು ಏಕ ನಿವೇಶನ ನಕ್ಷೆ ಮಂಜೂರಾತಿ ಸಂದರ್ಭದಲ್ಲಿ ಶುಲ್ಕಗಳನ್ನು ವಿಧಿಸಲು ಉಲ್ಲೇಖ (1)ರಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ,2024 ಕಲಂ 232(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಸತಿ /ವಸತಿಯೇತರ ಕಟ್ಟಡ ನಿರ್ಮಾಣಕ್ಕೆ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಲಂ 232 (2) ರಡಿಯಲ್ಲಿನ ಅವಕಾಶದಂತೆ ಕಟ್ಟಡ ಪರವಾನಗಿ ಮತ್ತು ಪ್ಲಿಂತ್ ಪ್ರಮಾಣಪತ್ರ ನೀಡುವಾಗ ವಿಧಿಸಬೇಕಾದ ವಿವಿಧ ಶುಲ್ಕಗಳ ದರಗಳನ್ನು ಕ್ರಮವಾಗಿ ಕೋಷ್ಟಕ –1 ಮತ್ತು ಕೋಷ್ಟಕ–2 ರಂತೆ ನಿಗದಿಪಡಿಸಲು ಚಾಲ್ತಿಯಲ್ಲಿರುವ ನಿವೇಶನದ ಮಾರ್ಗಸೂಚಿ ದರದ ಶೇಕಡಾವಾರು ಪ್ರಮಾಣದಲ್ಲಿ ಹಾಗೂ ಏಕ ನಿವೇಶನ ನಕ್ಷೆ ಮಂಜೂರಾತಿ ಶುಲ್ಕಗಳನ್ನು ಕೋಷ್ಟಕ–03 ರಲ್ಲಿ ಪ್ರಸ್ತಾಪಿಸಲಾದಂತೆ ವಿಧಿಸಲು ಉಲ್ಲೇಖ (1) ರಲ್ಲಿ ನಗರ ಪಾಲಿಕೆಯಿಂದ ನಿರ್ಣಯಿಸಿರುತ್ತದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಅಧಿಸೂಚಿಸಿದೆ.

**ಸಂಖ್ಯೆ: ಜಿ.ಬಿ.ಎ/ಮು.ಅ/ಪಿ.ಅರ್/203/2026–2027 ದಿನಾಂಕ: 23–07–2026**

ಈ ಹಿನ್ನಲೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024ರ ಕಲಂ 232(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024ರ ಕಲಂ 230 ರಡಿಯಲ್ಲಿ ಹಾಗೂ ಕೆಟಿಸಿಪಿ ಕಾಯ್ದೆ ಕಲಂ 15 ರಡಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ನಗರ ಪಾಲಿಕೆಯಿಂದ ಅನುಮತಿ ನೀಡಲು (ಕಟ್ಟಡ ನಕ್ಷೆ ಮಂಜೂರಾತಿ, ಪರಿಷ್ಕೃತ ನಕ್ಷೆ ಮಂಜೂರಾತಿ, ಪ್ಲಿಂತ್ ಪ್ರಮಾಣ ಪತ್ರ) ಹಾಗೂ ಸರ್ಕಾರದಿಂದ ಪ್ರತ್ಯಾಯೋಜಿಸಲಾದ ಅಧಿಕಾರ ಪ್ರತ್ಯಾಯೋಜನೆ ಆದೇಶದಂತೆ ಕೆಟಿಸಿಪಿ ಕಾಯ್ದೆ ಕಲಂ 17 ರಡಿಯಲ್ಲಿ ಏಕ ನಿವೇಶನ ನಕ್ಷೆ ಅನುಮೋದನೆಗೆ ಈ ಕೆಳಕಂಡ ಕೋಷ್ಟಕ (1) (2) ಮತ್ತು (3) ರಲ್ಲಿ ಅನ್ವಯವಾಗುವಂತೆ ಶುಲ್ಕಗಳನ್ನು ಪಾವತಿಸಿಕೊಳ್ಳಲು ದರಗಳನ್ನು ನಿಗದಿಪಡಿಸಿ ಆದೇಶಿಸಿದೆ.

## ಕೋಷ್ಟಕ – 1

**ಕಟ್ಟಡ ನಕ್ಷೆ ಮಂಜೂರಾತಿ /ಪರಿಷ್ಕೃತ ನಕ್ಷೆ ಮಂಜೂರಾತಿ ನೀಡುವ ಹಂತ**

| ಕ್ರ.ಸ | ಶುಲ್ಕಗಳ ವಿವರ (ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ) | ಚಾಲ್ತಿಯಲ್ಲಿರುವ ನಿವೇಶನದ ಮಾರ್ಗಸೂಚಿ ದರ ಗಳಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತಿ ಚಮೀಗೆ ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ (ಮಾರ್ಗಸೂಚಿ ದರ ರೂ 50,000/– ಚಮೀ ಕನಿಷ್ಠ ದರಕ್ಕೆ ಕಡಿಮೆ ಇಲ್ಲದಂತೆ) | |
|---|---|---|---|
| | | ವಸತಿ | ವಸತಿಯೇತರ /ವಾಣಿಜ್ಯ |
| 1 | 2 | 3 | 4 |
| | **ನಕ್ಷೆ ಮಂಜೂರಾತಿ /ಪರಿಷ್ಕೃತ ನಕ್ಷೆ ಮಂಜೂರಾತಿ** | | |
| 1 | **ಪರಿಶೀಲನಾ ಶುಲ್ಕ** | 0.009% | 0.014% |
| 2 | **ಮೂಲ ಸೌಕರ್ಯ ಮತ್ತು ಪರಿಸರ ಪರಿಣಾಮ ಶುಲ್ಕ**<br>(ಎ) ಪರವಾನಗಿ ಅವಧಿಗೆ (5 ವರ್ಷಕ್ಕೆ) | 0.10% | 0.25% |
| | (ಬಿ) ಪರವಾನಗಿ ಅವಧಿ ಮೀರಿದಲ್ಲಿ ಹೆಚ್ಚುವರಿ ಅವಧಿಗೆ (2 ವರ್ಷಕ್ಕೆ) | 0.05% | 0.10% |

| | | | |
|---|---|---|---|
| 3 | **ಪರವಾನಗಿ ಶುಲ್ಕ**<br>(ಎ) ಪರವಾನಗಿ ಅವಧಿ 5 ವರ್ಷಕ್ಕೆ | 0.18% | 0.28% |
| | (ಬಿ) ಪರವಾನಗಿ ಅವಧಿ ವಿಸ್ತರಣೆ ಶುಲ್ಕ<br>(ಹೆಚ್ಚುವರಿ 2 ವರ್ಷಕ್ಕೆ ಮಾತ್ರ ಸೀಮಿತವಾದಂತೆ) | 0.18% | 0.28% |
| | (ಸಿ)ನಿರ್ಮಾಣದ ಅವಧಿಯಲ್ಲಿ ಮಾಲೀಕತ್ವ ಬದಲಾವಣೆಯಾದಲ್ಲಿ ಪರವಾನಗಿ ಶುಲ್ಕ | 0.18% | 0.28% |
| 4 | ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೇ ವಲಯ ನಿಯಮಾವಳಿ /ಉಪವಿಧಿಗಳ ಮಿತಿಯೊಳಗೆ ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುವ ಕಟ್ಟಡದ ಭಾಗಕ್ಕೆ | 0.20 | 0.40 |
| 5 | ದೃಢೀಕರಿಸಿದ ನಕ್ಷೆ ಪ್ರತಿಗಳು (ಪ್ರತಿ ಒಂದಕ್ಕೆ) | ರೂ 200 | ರೂ 200 |
| 6 | ಕೆಟಿಸಿಪಿ ಕಾಯ್ದೆ-1961 ಕಲಂ 18(1), 18(1ಎ) & 18(ಎ) ರಡಿಯಲ್ಲಿ ಪಾವತಿಸಿಕೊಳ್ಳಲಾಗುವ ಶುಲ್ಕಗಳು<br><br>ಟಿಪ್ಪಣಿ: ಶುಲ್ಕಗಳನ್ನು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶ / ಅಧಿಸೂಚನೆಯಂತೆ ಯಥಾವತ್ತಾಗಿ ಅಳವಡಿಸಿಕೊಳ್ಳುವುದು. | ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ 3 ಟಿಟಿಪಿ 2015 ದಿನಾಂಕ: 25.02.2020 ರಲ್ಲಿ ನಿಗದಿಪಡಿಸಿರುವಂತೆ<br><br>ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ 23 ಟಿಟಿಪಿ 2020 (ಇ) ದಿನಾಂಕ: 21.06.2021 ರಲ್ಲಿ ನಿಗದಿಪಡಿಸಿರುವಂತೆ | |

## ಕೋಷ್ಟಕ – 2

**ಪ್ಲಿಂತ್ ಪ್ರಮಾಣಪತ್ರ ಹಂತ**

| ಕ್ರ.ಸ | ಶುಲ್ಕಗಳ ವಿವರ<br>(ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ) | ಚಾಲ್ತಿಯಲ್ಲಿರುವ ನಿವೇಶನದ ಮಾರ್ಗಸೂಚಿ ದರಗಳಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತಿ ಚಮೀ ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ<br>ಶೇಕಡಾವಾರು ಪ್ರಮಾಣ (ಮಾರ್ಗಸೂಚಿ | |
|---|---|---|---|
| | | ವಸತಿ | ವಸತಿಯೇತರ /ವಾಣಿಜ್ಯ |
| 1 | ಪರಿಶೀಲನಾ ಶುಲ್ಕ | 0.009% | 0.014% |
| 2 | ಪ್ಲಿಂತ್ ಪ್ರಮಾಣಪತ್ರ ಶುಲ್ಕ<br>(ಪ್ಲಿಂತ್ ವಿಸ್ತೀರ್ಣಕ್ಕೆ) | 0.11% | 0.18% |
| 3 | ಪ್ಲಿಂತ್ ಪ್ರಮಾಣಪತ್ರ ಪಡೆಯದೇ ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುವ ಕಟ್ಟಡದ ಭಾಗಕ್ಕೆ (ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ) | 0.06% | 0.08% |

**ಸೂಚನೆ:** "ಮಾರ್ಗಸೂಚಿ ದರ "ಅಂದರೆ (ಶುಲ್ಕಗಳ ಲೆಕ್ಕಾಚಾರದ ಉದ್ದೇಶಕ್ಕಾಗಿ)

1) ಮಂಜೂರಾತಿ / ಅನುಮತಿ ನೀಡುವ ಸಂದರ್ಭದಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ, 1957 ರ ಸೆಕ್ಷನ್ 45ಬಿ ಅಡಿಯಲ್ಲಿ ನಿರ್ದಿಷ್ಟ ನಿವೇಶನಕ್ಕೆ ನಿಗಧಿಪಡಿಸಲಾದ ಹಾಲಿ ಚಾಲ್ತಿಯಲ್ಲಿರುವ ಚ.ಮೀ. ಒಂದರ ಮಾರ್ಗಸೂಚಿ ದರ.
2) ದರ ನಿಗಧಿಪಡಿಸುವಲ್ಲಿ ಇರುವ ವಿಶೇಷ ಸೂಚನೆಗಳನ್ನು ಅಳವಡಿಸಿದ ನಂತರ ಲಭ್ಯವಾಗುವ ದರ ಪರಿಗಣಿಸುವುದು.
3) ಒಂದು ವೇಳೆ ನಿವೇಶನದ ಮಾರ್ಗಸೂಚಿ ದರ ಚ.ಮೀ. ಒಂದಕ್ಕೆ ರೂ. 50,000/- ಗಳಿಗಿಂತ ಕಡಿಮೆ ಇದ್ದಲ್ಲಿ ಕನಿಷ್ಠ ರೂ. 50,000/- ಗಳನ್ನು ಚ.ಮೀ. ಒಂದರ ಸ್ವತ್ತಿನ ಮಾರ್ಗಸೂಚಿ ದರವನ್ನಾಗಿ ಪರಿಗಣಿಸಿ ಅದರನ್ವಯ ಶುಲ್ಕ ಲೆಕ್ಕಾಚಾರ ಮಾಡತಕ್ಕದ್ದು.
4) ಮೇಲ್ಕಂಡಂತೆ ನಿಗದಿಪಡಿಸಿರುವ ಶುಲ್ಕಗಳ ದರಗಳಂತೆ ನಗರ ಪಾಲಿಕೆಯು ಪೂರ್ಣ ಶುಲ್ಕಗಳನ್ನು ಪಾವತಿಸಿಕೊಂಡ ನಂತರವೇ ಕಟ್ಟಡ ನಿರ್ಮಾಣಗಳಿಗೆ ಅನುಮತಿ/ಏಕ ನಿವೇಶನ ನಕ್ಷೆಗೆ ಅನುಮೋದನೆ ನೀಡುವುದು.

**ವಿಶೇಷ ಸೂಚನೆ:**

1. ನಿವೇಶನದ ಮೌಲ್ಯ ನಿರ್ಧರಣೆಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆಯಲ್ಲಿನ ಬೆಂಗಳೂರು ನಗರದ ಜಿಲ್ಲಾ ಉಪನೊಂದಣಾಧಿಕಾರಿಗಳ ವ್ಯಾಪ್ತಿಗೆ ಅನ್ವಯಿಸುವ ವಿಶೇಷ ಸೂಚನೆಗಳನ್ನು ಪಾಲಿಸುವುದು.
2. ಶುಲ್ಕ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ಜಿಲ್ಲಾ ಉಪನೊಂದಣಿ ಕಛೇರಿಗಳ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುವ ಅಧಿಸೂಚನೆಯಲ್ಲಿನ ಮಾರ್ಗಸೂಚಿ ದರಗಳು ಹಾಗೂ ವಿಶೇಷ ಸೂಚನೆಗಳನ್ನು ಅಳವಡಿಸಿಕೊಳ್ಳತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



# ಕೋಷ್ಟಕ – 3

**ಏಕ ನಿವೇಶನ ನಕ್ಷೆ ಮಂಜೂರಾತಿ /ಪರಿಷ್ಕೃತ ಏಕ ನಿವೇಶನ ನಕ್ಷೆ ಮಂಜೂರಾತಿ ನೀಡುವ ಹಂತ**

| ಕ್ರ.ಸ | ವಿವರಗಳು | ಕಾಯ್ದೆಗಳು |
|---|---|---|
| 1 | ಪರಿಶೀಲನಾ ಶುಲ್ಕ | ಸರ್ಕಾರದ ಪತ್ರ ಸಂಖ್ಯೆ ನ.ಅ.ಇ 252 ಬೆಂರೂಪ್ರಾ 2015 ದಿನಾಂಕ: 15.05.2021 ರಲ್ಲಿ ನಿಗದಿಪಡಿಸಿರುವಂತೆ |
| 2 | ಕೆಟಿಸಿಪಿ ಕಾಯ್ದೆ–1961 ಕಲಂ 18(1), 18(1ಎ) & 18(ಎ) ರಡಿಯಲ್ಲಿ ಪಾವತಿಸಿಕೊಳ್ಳಲಾಗುವ ಶುಲ್ಕಗಳು | ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ 3 ಟಿಟಿಪಿ 2015 ದಿನಾಂಕ: 25.02.2020 ರಲ್ಲಿ ನಿಗದಿಪಡಿಸಿರುವಂತೆ<br><br>ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ 23 ಟಿಟಿಪಿ 2020 (ಇ) ದಿನಾಂಕ: 21.06.2021 ರಲ್ಲಿ ನಿಗದಿಪಡಿಸಿರುವಂತೆ |
| 3 | ಟಿಪ್ಪಣಿ: ಕ್ರಮ ಸಂಖ್ಯೆ: 01 ಮತ್ತು 02 ರ ಶುಲ್ಕಗಳನ್ನು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶ / ಅಧಿಸೂಚನೆಯಂತೆ ಅಳವಡಿಸಿಕೊಳ್ಳುವುದು. | |

ಮುಂದುವರೆದು, ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಪ್ರಸ್ತಾವನೆಗಳಿಗೆ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024ರ ಕಲಂ 241 (4) ರ ಅವಕಾಶದಡಿಯಲ್ಲಿ ಉಲ್ಲೇಖ(3)ರ ದಿನಾಂಕ: 14.05.2026ರಂದು ಕಟ್ಟಡ ಉಪವಿಧಿಗೆ ತಂದಿರುವ ತಿದ್ದುಪಡಿ ಅಧಿಸೂಚನೆಯನ್ವಯ ನಿಗಧಿಪಡಿಸಿರುವ ಶುಲ್ಕ/ ದಂಡ ಶುಲ್ಕಗಳನ್ನು ಪಾವತಿಸಿಕೊಳ್ಳಲು ಆದೇಶಿಸಿದೆ.

**ಮುಖ್ಯ ಆಯುಕ್ತರು**
**ಗ್ರೇಟರ್ ಬೆಂಗಳೂರು ಪ್ರಾಧಿಕಾರ**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU